**ನ್ಯಾಯಾಲಯದ ಆದೇಶದನ್ವಯ ದಿನಾಂಕಃ 27-10-2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಕೆ ಡಿ ಬಿ ವಕೀಲರಿಂದಃ**

ನಾನು ಹಲಗೇರಿಯಲ್ಲಿ ವಾಸವಾಗಿರುತ್ತೇನೆ. ನನ್ನ ತಾತ ಮತ್ತು ನನ್ನ ತಂದೆ ಹಲಗೇರಿಯಲ್ಲಿ ವಾಸವಾಗಿದ್ದರು. ವಾದಿಯರು ತಮ್ಮ ವಾದ ಪತ್ರದಲ್ಲಿ ಎನು ಬರೆದಿರುತ್ತಾರೆ ಎಂದು ನನಗೆ ಸಂಪೂರ್ಣವಾಗಿ ಮಾಹಿತಿ ಇರುತ್ತದೆ. ವಾದಿಯರ ಕುಟುಂಬ ಮೂಲ ಪುರುಷ ಸಿದ್ದಪ್ಪ ತಂದೆ ಉಜ್ಜಪ್ಪ ದಾನಪ್ಪನವರ. ಸದರಿ ಸಿದ್ದಪ್ಪನಿಗೆ ರೇವಣಪ್ಪ , ಸಿದ್ದಬಸಪ್ಪ , ಜಟ್ಟೆಪ್ಪ , ಉಜ್ಜಪ್ಪ , ಮರುಳ ಸಿದ್ದಪ್ಪ, ಪುಟ್ಟವ್ವ , ಸಿದ್ದವ್ವ ಎನ್ನುವವರು ಮಕ್ಕಳು ಇರುತ್ತಾರೆ ಎಂದರೆ ಸರಿ. ರೇವಣಪ್ಪನಿಗೆ ಚನ್ನವ್ವ , ಜಯಮ್ಮ , ಸುರೇಶ , ಮಂಗಳಾ ಎಂಬ ಮಕ್ಕಳಿದ್ದಾರೆ. ಸಿದ್ದ ಬಸಪ್ಪನಿಗೆ ಗೌರವ್ವ , ಮಂಜಪ್ಪ ಎಂಬ ಮಕ್ಕಳಿದ್ದಾರೆ. ಜಟ್ಟೆಪ್ಪ ಸದರಿ ಕೇಸು ನಡೆಯುವಾಗ ತೀರಿಕೊಂಡಿದ್ದಾನೆ ಎಂದರೆ ಸರಿ. 1 ನೇ ವಾದಿಯ ಹೆಂಡತಿ ಸುಶೀಲವ್ವ ಎಂದರೆ ಸರಿ. ಮೃತ ಮರುಳಸಿದ್ದಪ್ಪನಿಗೆ ಜಗದೀಶ , ಚೇತನ ಎಂಬ ಇಬ್ಬರು ಮಕ್ಕಳು ಇರುತ್ತಾರೆ ಎಂದರೆ ಸರಿ. ಸಿದ್ದಪ್ಪ 1974 ರಲ್ಲಿ ತೀರಿಕೊಂಡಿರುತ್ತಾನೆ ಎಂದರೆ ಸರಿ. ಆ ಸಮಯದಲ್ಲಿ ಸಿದ್ದಪ್ಪ , ರೇವಣಪ್ಪ , ಉಜ್ಜಪ್ಪ ರವರು ಮತ್ತು ಅವರ ಮಕ್ಕಳು ಒಂದೇ ಮನೆಯಲ್ಲಿ ವಾಸವಾಗಿದ್ದರು ಎಂದರೆ ಸರಿ. ದಾವಾ ಶೆಡ್ಯೂಲ್ ನ ಬಗ್ಗೆ ಸಂಪೂರ್ಣ ಮಾಹಿತಿ ಇದೆ ಎಂದರೆ ಇದೆ. ದಾವಾ ಶೆಡ್ಯೂಲ್ ಎ ಆಸ್ತಿ ಸರ್ವೆ ನಂ.175 2 ಬಿ - ಎಫ್ ಒಟ್ಟು ವಿಸ್ತೀರ್ಣ 13 ಎಕರೆ 39 ಗುಂಟೆ ಇರುತ್ತದೆ. ದಾವಾ ಶೆಡ್ಯೂಲ್ ಬಿ ಆಸ್ತಿಯ ಒಟ್ಟು ವಿಸ್ತೀರ್ಣ 10 ಎಕರೆ 16 ಗುಂಟೆ ಇರುತ್ತದೆ. ಸರ್ವೆ ನಂ.298 ನೇದ್ದನ್ನು ಸಿದ್ದಪ್ಪ ತಂದೆ ರೇವಣಪ್ಪ ರವರು ಮೋಟಗಿ ರವರಿಂದ 400 /- ರೂಗಳಿಗೆ ದಿನಾಂಕ 22.05.1936 ರಂದು ಖರೀದಿ ಮಾಡಿರುತ್ತಾರೆ ಎಂದರೆ ಸರಿ. ದೊಡ್ಡವೀರಪ್ಪ ಚನ್ನಪ್ಪ ಮೋಟಗಿ ರವರು ದಿನಾಂಕ 20.06.1936 ರಂದು ಸಿದ್ದಪ್ಪನಿಗೆ ಸದರಿ ಸರ್ವೆ ನಂ.298 ನ್ನು ಖರೀದಿ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ಬಗ್ಗೆ ದಾಖಲೆಗಳನ್ನು ನಾನು ನೋಡಿಲ್ಲ. ಸರ್ವೆ ನಂ.298 ಷರತ್ತು ಪ್ರಕಾರ ಖರೀದಿ ಆಗಿ ಡ ಮಂಜೂರು ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಡ ನಂಬರು 402 ರ ಪ್ರಕಾರ ದಿನಾಂಕ 13.11.1949 ರಲ್ಲಿ ಅಂಕಲೆಪ್ಪ ಬಸಪ್ಪ ಕನ್ನಪ್ಪನವರ ಸಾದಾ ಕುಳ ಎಂದು ಮಂಜೂರು ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಡ ನಂ.2148 ರ ಪ್ರಕಾರ ಅಂಕಲಪ್ಪ ಬಸಪ್ಪ ಕನ್ನಪ್ಪನವರ ಸಾದಾ ಕುಳ ರೈತನಿಂದ ಕಡಿಮೆ ಆಯಿತು ಎಂದರೆ ನನಗೆ ಗೊತ್ತಿಲ್ಲ. ನಂತರ ಇದೇ ಸರ್ವೆ ನಂಬರು 2205 ಡ ನಂಬರು ಪ್ರಕಾರ ದಿನಾಂಕ 21.12.1955 ರ ಪ್ರಕಾರ ಸಿದ್ದಪ್ಪ ರೇವಣಪ್ಪ ರವರ ಹೆಸರು ರೈತ ನಾತೆಯಿಂದ ಸಾದಾ ರೈತ ಎಂದು ದಾಖಲಾಯಿತು ಎಂದರೆ ನನಗೆ ಗೊತ್ತಿಲ್ಲ. ಇದೇ ಸರ್ವೆ ನಂಬರು ಡ ನಂ.2555 ದಿನಾಂಕ 08.05.1963 ಸಿದ್ದಪ್ಪ ಮತ್ತು ಗುರುನಗೌಡ

ರುದ್ರನಗೌ ಪಾಟೀಲ ರವರಿಗೆ ರೈತನಾತೆಯಿಂದ ಬಿಡಿಸಿಕೊಂಡು ಸಾದಾ ಖುಳ ರೈತ ಎಂದು ಹೆಸರು ಬಂದಿತು ಎಂದರೆ ನನಗೆ ಗೊತ್ತಿಲ್ಲ.

**ಪಾಟೀ ಸವಾಲುಃ ಪ್ರತಿವಾದಿಗಳ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು .**

-

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-

(ಶ್ರೀಮತಿ ಹುಲ್ಲೂರ ಹೇಮಲತಾ ಬಸಪ್ಪ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.